೩೯೦೫ (೪೦೮೩) **ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು)** :- ಮಾನ್ಯ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ದೊಡ್ಡ ಜಾನುವಾರು, ಸಣ್ಣ ಜಾನುವಾರು, ಕರುಜಾನುವಾರು, ಕೋಳಿ ಹಾಗೂ ಇತರೆ ಸಾಕುಪ್ರಾಣಿಗಳ ಸಂಖ್ಯೆ ಎಷ್ಟು;

ಆ) ಜಾನುವಾರುಗಳಿಗೆ ಔಷಧಿಗಳು ಕೊರತೆಯಾಗಿದೆಯೇ; ಆಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮಗಳೇನು;

ಇ) ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಪಶುಸಂಗೋಪನಾ ಇಲಾಖೆಗೆ ವಾರ್ಷಿಕ ಖರ್ಚು ಎಷ್ಟು ಇದರಲ್ಲಿ ಔಷಧಿ ಬಾಬ್ತು ಖರ್ಚು ಎಷ್ಟು; ಈ ಸಂಬಂಧವಾಗಿ ಈ ವರ್ಷ ಬಿಡುಗಡೆ ಮಾಡಿದೆಷ್ಟು (ವಿವರ ನೀಡುವುದು)?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ)

೧.	ದನಗಳು	೫೭೬೮೭
೨.	ಎಮ್ಮೆಗಳು	೨೩೪೮
೩.	ಕರುಗಳು	೧೯೨೨೯
೪.	ಮೇಕೆಗಳು	೫೮೬೪
೫.	ಹಂದಿಗಳು೧೮	೩೩
೬.	ನಾಯಿಗಳು	೪೧೧೪೪
೭.	ಮೊಲಗಳು	೫೧
	ಒಟ್ಟು	**೧೨೮೧೫೬**

ಆ) ಕೊರತೆ ಇದೆ.

ರಾಜ್ಯಾದ್ಯಾಂತ ಔಷಧಿ ಖರೀದಿಗಾಗಿ ರೂ.೫.೭೫ ಕೋಟಿಗಳಿಂದ ೨೦೦೫-೦೬ನೇ ಸಾಲಿನಲ್ಲಿ ರೂ.೬.೬೦ ಕೋಟಿಗಳಿಗೆ ಹೆಚ್ಚಿಸಿ ಅನುದಾನ ಒದಗಿಸಲಾಗಿದೆ.

ಇ) ೨೦೦೪-೦೫ ರಲ್ಲಿ ವಾರ್ಷಿಕ ವೆಚ್ಚ ರೂ. ೩೩.೬೨ ಲಕ್ಷಗಳು ಇದರಲ್ಲಿ ಔಷಧಿಗಳು ರೂ. ೩.೯೩ ಲಕ್ಷ.

ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಸಕ್ತ ಸಾಲಿಗೆ ವೀರ್ಯ ನಳಕೆಗಳು ದ್ರವಸಾರಜನಕ ಸರಬರಾಜು ಮತ್ತು ಔಷಧಿಗಳ ಖರೀದಿಗಾಗಿ ರೂ.೧೫.೬ ಲಕ್ಷಗಳನ್ನು ಒದಗಿಸಲಾಗಿದೆ.

೩೯೦೬ (೪೦೩೪) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತ ಹಿಂದುಳಿದ ಜಾತಿ-ವರ್ಗಗಳಿಗೆ ವಿಧಿಸಿರುವ ಆದಾಯದ ಮಿತಿ ಎಷ್ಟು, ಇದನ್ನು ಯಾವಾಗಿನಿಂದ ಅನುಷ್ಠಾನಗೊಳಿಸಲಾಗಿದೆ;

ಆ) ಕೆನೆ ಪದರ ನೀತಿ (ಕ್ರೀಮ್ ಲೆಯರ್) ಯಾರಿಗೆ ಅನ್ವಯಿಸುತ್ತದೆ.

ಇ) ಈ ಆದಾಯ ಗರಿಷ್ಟ ಮಿತಿಯನ್ನು ರೂ.೨.೦೦ ಲಕ್ಷಕ್ಕೆ ಏರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ ಯಾವಾಗಿನಿಂದ ಜಾರಿ ಗೊಳಿಸಲಾಗುವುದು.

ಈ) ಆದಾಯದ ಗರಿಷ್ಟ ಮಿತಿಯನ್ನು ಏರಿಸಲು ಉದ್ದೇಶಿಸಿದೆ ಕಾರಣಗಳೇನು, ಇದರಿಂದಾಗಿ ಹಿಂದುಳಿದ ವರ್ಗಗಳಿಗೆ ಅನ್ಯಾಯವಾದಂತಾಗುವುದಿಲ್ಲವೇ, ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಪಕಇ ೨೨೫ ಬಿಸಿಎ ೨೦೦೦, ದಿನಾಂಕ : ೩೦-೦೩-೨೦೦೨ ರನ್ವಯ ವಾರ್ಷಿಕ ಆದಾಯ ಮಿತಿ ರೂ.೨.೦೦ ಲಕ್ಷ ನಿಗದಿಗೊಳಿಸಿದ್ದು, ಜಾರಿಗೆ ತರಲಾಗಿದೆ.

ಆ) ದಿನಾಂಕ ೩೦-೦೩-೨೦೦೨ರ ಆದೇಶದನ್ವಯ ಕರ್ನಾಟಕ ಅನುಸೂಚಿ ಜಾತಿ – ಅನುಸೂಚಿತ ಪಂಗಡ ಹಾಗೂ ಪ್ರವರ್ಗ – ೧ಕ್ಕೆ ಹೊರತುಪಡಿಸಿ ಸೇರಿದವರನ್ನು ಉಳಿದ ಪ್ರವರ್ಗ ೧೧-ಅ, ೧೧ಬಿ, ೧೧೧-ಎ, ೧೧೧ ಬಿ ಗೆ ಸೇರಿದವರಿಗೆ ಅನ್ವಯಿಸುತ್ತದೆ.

ಇ) ಪ್ರಸ್ತುತ ಜಾರಿಯಲ್ಲಿರುವ ಆದಾಯಮಿತಿ ರೂ.೨.೦೦ ಲಕ್ಷಗಳಾಗಿದ್ದು, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.